ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.

## ಸಿ.ಸಿ.ನಂ.83/2023

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಚೇತನ್ ಕುಮಾರ್ ಎ. ಎಂ.** | | |
| **ತಂದೆಃಹೆಸರು** | **ಮಲ್ಲೇಶ್** | **ಪಿಡಬ್ಲ್ಯೂಃ** | **5** |
| **ವಯಸ್ಸು** | **35 ವರ್ಷ** | **ಸಿಡಬ್ಲ್ಯೂಃ** | **6** |
| **ಉದ್ಯೋಗಃ** | **ಆಟೋ ಚಾಲಕ** | | |
| **ವಾಸ ಸ್ಥಳಃ** | **ಬೆಂಗಳೂರು.** | | |

**ದಿನಾಂಕ 29-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ**

ಈ ದಿನ ನ್ಯಾಯಾಲಯದಲ್ಲಿ ಆರೋಪಿಯು ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಕಲಂ 317 ಸಿ.ಆರ್.ಪಿ.ಸಿ. ಅಡಿಯಲ್ಲಿ ಅರ್ಜಿಯನ್ನು ದಾಖಲಿಸಿ, ಗುರುತಿಸುವ ವಿಚಾರದಲ್ಲಿ ತಕರಾರು ಇಲ್ಲ ಎಂದು ನುಡಿದಿದ್ದರಿಂದ, ಈ ಕೆಳಕಂಡಂತೆ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು.

2017 ರಿಂದ ಸೆಪ್ಟಂಬರ್ 2025 ರವರೆಗೆ ಆದೀಶ್ವರ ಶೋ ರೂಂ ನ ಮುಖ್ಯ ಕಛೇರಿ ಬೆಂಗಳೂರಿನಲ್ಲಿ ಸ್ಟಾಕ್ ಆಡಿಟ್ ಅಸಿಸ್ಟೆಂಟ್ ಎಂದು ಕೆಲಸ ಮಾಡಿದ್ದೆನು.

ಚಾಸಾ-1, 7 ರಿಂದ 10 ಹಾಗೂ ಆರೋಪಿಯ ಪರಿಚಯ ಇದೆ. ಪ್ರತಿ ಮೂರು ತಿಂಗಳಿಗೆ ಒಂದು ಸಾರಿ ಆದೀಶ್ವರ ಬ್ರಾಂಚ್ ಗಳಿಗೆ ಹೋಗಿ, ಸಿಸ್ಟಮ್ & ಫಿಸಿಕಲ್ ಕ್ಯಾಶ್, ಸಿಸ್ಟಮ್ & ಫಿಸಿಕಲ್ ಸ್ಟಾಕ್, ಕಸ್ಟಮರ್ ಬ್ಯಾಲೆನ್ಸ್, ಕಸ್ಟಮರ್ ರಿಂದ ಬರಬೇಕಾದ ಬ್ಯಾಲೆನ್ಸ್ ಗಳನ್ನು ಬ್ರಾಂಚ್‌ನ ಕಂಪ್ಯೂಟರ್‌ನಲ್ಲಿ ಪರಿಶೀಲಿಸುವುದು ನನ್ನ ಕೆಲಸ. ನಾನು, ಚಾಸಾ-7 ರಿಂದ 10 ರವರು 26 ಜನವರಿ 2022 ರಂದು ಸಿಂಧನೂರಿನ ಆದೀಶ್ವರ ಶೋ ರೂಂ ಗೆ ಪರಿಶೀಲಿಸಲು ಹೋಗಿ, ಫಿಸಿಕಲ್ ಆಡಿಟ್

ಮಾಡಿ, ವರದಿಯನ್ನು ಮುಖ್ಯ ಕಛೇರಿಗೆ ವರದಿ ನೀಡಿರುತ್ತೇವೆ. ಸಾಕ್ಷಿಯು ನಿಪಿ-12 ನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-12 ಬಿ ಎಂದು ಗುರುತಿಸಲಾಯಿತು.

ನಿಪಿ-12 ರ ಪ್ರಕಾರ ಒಟ್ಟು ಹಣ ರೂ.12,95,000/- ದುರುಪಯೋಗ, ಅದರಲ್ಲಿ ಹಣ, ಸ್ಟಾಕ್ ದುರುಪಯೋಗ ಆಗಿರುತ್ತದೆ. ಆ ಬಗ್ಗೆ ನಾನು ವರದಿ ಕೊಟ್ಟಿರುತ್ತೇನೆ. ವಿವರವಾದ ವರದಿಯನ್ನು ನಿಪಿ-12 ರಲ್ಲಿ ನಮೂದಿಸಿರುತ್ತೇನೆ. ಶೋ ರೂಂ ನವರು ನಮಗೆ ಅಸ್ಲಾಂ ರವರು ಈ ರೀತಿ ಮಾಡಿದ್ದಾರೆ ಎಂದು ಹೇಳಿದ್ದರು.

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃಃ ಮಾನ್ಯ ಸ.ಸ.ಅ. ರವರಿಂದಃಃ**

ನಿಪಿ-12 ರಲ್ಲಿ ರೂ.11,95,399/- ಹಣ ದುರುಪಯೋಗ ಆಗಿರುತ್ತದೆ ಎಂದು ವರದಿ ನೀಡಿರುತ್ತೀರಿ ಎಂದರೆ ಸರಿ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

1. ನಾನು ಬಿ. ಎ. ಪದವೀಧರ. ಆದೀಶ್ವರ ಶೋ ರೂಂ ಗೆ ಸಂಬಂಧಿಸಿದ 70 ಬ್ರಾಂಚ್‌ಗಳು ಇವೆ. ಒಂದೊಂದು ಬ್ರಾಂಚಿನಲ್ಲಿ ಎಷ್ಟು ಜನ ಸಿಬ್ಬಂದಿಗಳು ಇರುತ್ತಾರೆ ಎಂದರೆ ಸಾಕ್ಷಿಯು ಚಿಕ್ಕ ಶೋ ರೂಂ ಆದರೆ 4 ಜನ, ದೊಡ್ಡ ಶೋ ರೂಂ ಆದರೆ 7 ಜನ ಇರುತ್ತಾರೆ ಎನ್ನುತ್ತಾರೆ.

2. ಆಡಿಟ್ ಮಾಡುವುದು ಮಾತ್ರ ನನ್ನ ಕೆಲಸ ಆಗಿತ್ತು. ಎಂಪ್ಲಾಯ್ಸ್ ನ ಬಗ್ಗೆ ನಿಮಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿ.

3. ಎಲ್ಲಾ ಮಾಲುಗಳಿಗೆ ಕ್ರಮ ಸಂಖ್ಯೆ ಬೇರೆ ಬೇರೆ ಇರುತ್ತದೆ ಎಂದರೆ ಸರಿ. ಯಾವ ಕ್ರಮ ಸಂಖ್ಯೆಯ ಗೂಡ್ಸ್ ಮಿಸ್ ಆಗಿದೆ ಎಂದು ತೋರಿಸಿರುತ್ತೀರಾ ಎಂದರೆ ಸಾಕ್ಷಿಯು ಆ ರೀತಿ ತೋರಿಸಿಲ್ಲ ಎನ್ನುತ್ತಾರೆ. ಸಾಕ್ಷಿಯು ಮುಂದುವರೆದು ಮಿಸ್ ಆದ ಗೂಡ್ಸ್‌ನ ಬಗ್ಗೆ ನಾನು ನಿಪಿ-12 ರಲ್ಲಿ ನಮೂದಿಸಿಲ್ಲ.

4. ನನ್ನ ಮೇಲೆ ಸ್ಟಾಕ್ ಆಡಿಟ್ ಹೆಡ್ ಎಂಬ ಹಿರಿಯ ಅಧಿಕಾರಿ ಇರುತ್ತಾರೆ. ಆಡಿಟ್ ವರದಿಯನ್ನು ಅಪ್ರೂವ್ ಮಾಡುವ ಅಧಿಕಾರ ನಿಮ್ಮ ಹಿರಿಯ ಅಧಿಕಾರಿಗೆ ಇರುತ್ತದೆ ಎಂದರೆ ಸರಿ.

ನಿಪಿ-12 ರಲ್ಲಿ ನಿಮ್ಮ ಹಿರಿಯ ಅಧಿಕಾರಿ ಅದನ್ನು ಅಪ್ರೂವ್ ಮಾಡಿದ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ನೀವು ವರದಿಯನ್ನು ಅಪ್ರೂವ್ ಮಾಡಿದರೆ ಅದು ಸಮಂಜಸ ಅಲ್ಲ ಎಂದರೆ ಸರಿ.

5. ನಿಪಿ-12 ನ್ನು ನೀವು ಆಡಿಟ್ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-12 ಸುಳ್ಳು ವರದಿ ಇರುತ್ತದೆ ಎಂದರೆ ಸರಿಯಲ್ಲ.

6. ಒಂದು ಶೋ ರೂಂ ಗೆ ಸಂಬಂಧಿಸಿದಂತೆ 3 ತಿಂಗಳಿಗೊಮ್ಮೆ ಆಡಿಟ್ ಮಾಡುತ್ತೇವೆ. ನೀವು ಸಿಂಧನೂರಿನ ಕಛೇರಿಗೆ ಎಷ್ಟು ಬಾರಿ ಭೇಟಿ ನೀಡಿ ಆಡಿಟ್ ಮಾಡಿರುತ್ತೀರಿ ಎಂದರೆ ಸಾಕ್ಷಿಯು 2017, 2018 ರಲ್ಲಿ ತಲಾ 3 ಸಲ, 2019, 2020 ರಲ್ಲಿ ಲಾಕ್ ಡೌನ್ ಆಗಿತ್ತು, 2021 ರಲ್ಲಿ ಮಾಡಿಲ್ಲ, 2022 ರಲ್ಲಿ ಜನವರಿಯಲ್ಲಿ 1 ಸಲ ಆಡಿಟ್ ಮಾಡಿದ್ದೆವು.

7. ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಸಿಂಧನೂರು.**